ಶ್ರೀ ಕೆ. ಶ್ರೀನಿವಾಸಗೌಡ : ಮಾನ್ಯ ಅಧ್ಯಕ್ಷರೆ, ಇವರ ಇಬ್ಬರ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಹಾಗೆ ನಮ್ಮ ಕೆಲಸ ನಿಂತು ಹೋಗುವುದು ಬೇಡ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಕೋಲಾರ ಪಟ್ಟಣಕ್ಕೆ ಕುಡಿಯುವ ನೀರಿನ ಡೀಸಿಲ್ಟಿಂಗ್ ಆಫ್ ಟ್ಯಾಂಕ್ ಆಗಬೇಕೆಂದು ಹೇಳಿದ್ದಾರೆ, ಇದರ ಬಗ್ಗೆ ನಾನು ನಾಳೆ ದಿವಸ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ : ನಾವು ನಿಮ್ಮ ಸ್ಟೇಟ್‌ಮೆಂಟ್‌ನ್ನು ಕೇಳುತ್ತಿಲ್ಲ. ತಾವು ಸ್ಟೇಟ್‌ಮೆಂಟ್ ಮಾಡಿ ಹಣವನ್ನು ಬಿಡುಗಡೆ ಮಾಡುವುದಾಗಿ ಹೇಳಿರುತ್ತೀರಿ. ಮಾನ್ಯ ಮುಖ್ಯ ಮಂತ್ರಿಗಳು ಕೂಡ ಕೋಲಾರಕ್ಕೆ ಬಂದಿದ್ದಾಗ ಹೇಳಿದ್ದಾರೆ. ಸ್ಟೇಟ್‌ಮೆಂಟ್ ಏಕೆ? ನಾಳೆ ನೀವು ಆದೇಶವನ್ನು ಮಾಡಿದರೆ, ಇಲಾಖೆಯಿಂದ ಅಧಿಕಾರಿಗಳು ಹಣವನ್ನು ಬಿಡುಗಡೆ ಮಾಡುತ್ತಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಏನು ಹೇಳುವುದು ಇದೆ, ನಾಳೆ ಇದರ ಬಗ್ಗೆ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾಳೆ ಮಾನ್ಯ ಸಚಿವರು ಉತ್ತರವನ್ನು ಕೊಡುತ್ತಾರೆ. ಮತ್ತೆ ಏನಾದರೂ ಕೇಳುವುದು ಇದ್ದರೆ ತಾವು ಕೇಳಿ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೆ, ತಾವು ಶೂನ್ಯವೇಳೆಯಲ್ಲಿ ಇದನ್ನು ಪ್ರಸ್ತಾಪ ಮಾಡಿರುತ್ತೀರಿ, ಅದು ನಿಮ್ಮಂತೆ ಇರಬಹುದು, ತಾವು ಅದರ ಬಗ್ಗೆ ಏಕೆ ಪ್ರಶ್ನೆಯನ್ನು ಮಾಡುತ್ತೀರಿ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯವೇಳೆಯಲ್ಲಿ ಮಾತನಾಡುವುದಾಗಿ ನಿನ್ನೆ ಹಾಗೂ ಇವತ್ತು ಕೊಟ್ಟಿರುತ್ತೇನೆ, ಅದು ಇವತ್ತು ಬರಲಿಲ್ಲ.

ಅಧ್ಯಕ್ಷರು : ಸರ್ಕಾರದವರು ರಿಪ್ಲೈ ಕೊಡುವುದಕ್ಕೆ ಯಾವಾಗ ರೆಡಿಯಾಗಿರುತ್ತಾರೆ. ಅದರ ಬಗ್ಗೆ ನಾವು ದಿನಾಲು ಎರಡು ಹಾಕಿಕೊಂಡು ತೆಗೆದುಕೊಳ್ಳುತ್ತೇವೆ. ಇವತ್ತು ಎರಡು ಚರ್ಚೆಗೆ ತೆಗೆದುಕೊಂಡಿದ್ದೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಗೃಹ ಸಚಿವರಿಗೆ ಬೇಗ ಕಳುಹಿಸಿಕೊಡುವಂತೆ ಹೇಳಬೇಕು.

ಅಧ್ಯಕ್ಷರು : ಬೇಗನೆ ಕಳುಹಿಸಿಕೊಡುವಂತೆ ಸರ್ಕಾರಕ್ಕೆ ನಾನು ಹೇಳುತ್ತೇನೆ.

ಗಮನ ಸೆಳೆಯುವ ಸೂಚನೆ

ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು ಸಮರ್ಪಕವಾಗಿ ಕಾರ್ಯ ನಿರ್ವಹಿಸದೆ ರೈತರು ನಷ್ಟಕ್ಕೆ ಗುರಿಯಾಗಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ

+ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಅಧ್ಯಕ್ಷರೆ, ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು ಸಮರ್ಪಕವಾಗಿ ಕಾರ್ಯನಿರ್ವಹಿಸದೆ ರೈತರು ನಷ್ಟಕ್ಕೆ ಗುರಿಯಾಗಿ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) : ಮೈಸೂರು ಸಕ್ಕರೆ ಕಂಪನಿಯು 1933ರಲ್ಲಿ ಸ್ಥಾಪನೆಗೊಂಡು ಇದರ ಹೆಚ್ಚಿನ ಯಂತ್ರ ಭಾಗಗಳು ಹಾಗೂ ನಿರ್ಣಯಕ ಘಟಕಗಳು ಬಹಳಷ್ಟು ಹಳೆಯದಾಗಿದ್ದು ಇದರಿಂದ ಉತ್ತಮ ದರ್ಜೆಯ ಸಕ್ಕರೆಗಳನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ ಹಾಗೂ ಆಧುನಿಕ ಸಕ್ಕರೆ ಕಂಪನಿಗಳ ಪೈಪೋಟಿಗಳನ್ನು ಸಮರ್ಥ ರೀತಿಯಲ್ಲಿ ಎದುರಿಸಲು ಮೈಸೂರು ಸಕ್ಕರೆ ಕಂಪನಿಯು 3 ಹಂತಗಳಲ್ಲಿ ಕಾರ್ಖಾನೆಯು ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ತೀರ್ಮಾನಿಸಿತು. ಇದರಿಂದಾಗಿ ಹಬೆ ಉಳಿತಾಯ, ವಿದ್ಯುತ್ ಉಳಿತಾಯ, ಹೆಚ್ಚು ಕಬ್ಬು ಅರೆಯುವ ಸಾಧ್ಯತೆ ಹಾಗೂ ಉತ್ತಮ ದರ್ಜೆಯ ಸಕ್ಕರೆಯನ್ನು ಪಡೆಯಲು ಯೋಜಿಸಲಾಗಿದೆ. ಅಭಿವೃದ್ಧಿ ಕಾರ್ಯಕ್ರಮದ ಎರಡು ಹಂತಗಳು ಈಗಾಗಲೇ ಮುಗಿದಿದ್ದು, ಸಕ್ಕರೆ ಕಂಪನಿಯ ಪ್ರಮುಖ ಯಂತ್ರಗಳಾದ ಸೆಮಿಕೆಸ್ಸರ್, ಎವಾಪೋರೇಟರ್, ಆಟೋಮ್ಯಾಟಿಕ್ ಸೆಂಟ್ರಿಫಿಗಲ್ ಮೆಷಿನ್ ಮತ್ತು ಕಂಟಿನ್ಯೂಐಆರ್ ಫ್ಯಾನ್ ಈಗಾಗಲೇ ಅಳವಡಿಸಲಾಗಿ ಇವುಗಳ ಕಾರ್ಯ ತೃಪ್ತಿಕರವಾಗಿದೆ. ಕಾರ್ಖಾನೆಯ ಆಧುನೀಕರಣಕ್ಕಾಗಿ ರೂ. 10.61 ಕೋಟಿ ವೆಚ್ಚವಾಗಿರುತ್ತದೆ.

ಈ ಮೇಲ್ಕಂಡ ಆಧುನೀಕರಣವನ್ನು ಕಂಪನಿಯು ಹಂತ ಹಂತವಾಗಿ ಕೈಗೊಂಡಿದ್ದು ಕಂಪನಿಯ ಲಾಭ ಹಾಗೂ ಕಾಯ್ದಿಟ್ಟ ಬಂಡವಾಳಗಳಿಂದ ಹೆಚ್ಚಿನ ಆಧುನೀಕರಣವನ್ನು ಕೈಗೊಳ್ಳಲಾಗಿದ್ದು ಆಧುನೀಕರಣದಿಂದ ಆದ ಖರ್ಚಿನಿಂದ ರೈತರಿಗೆ ಹಣ ಪಾವತಿ ಮಾಡಲು ವಿಳಂಬವಾಗಿದೆ ಎಂಬ ಸಂಗತಿ ಸರಿಯಲ್ಲ. ಕಂಪನಿಯು 1999-2000ನೇ ಹಂಗಾಮಿಗೆ 9.68 ಎಂ.ಟಿ. ಲಕ್ಷ ಕಬ್ಬು ಅರೆದಿದ್ದು ಇದು ಕಂಪನಿಯು ಸ್ಥಾಪನೆಯಾದ 1933ನೇ ವರ್ಷದಿಂದ ಒಂದು ಸರ್ವಕಾಲೀನ ದಾಖಲೆಯಾಗಿರುತ್ತದೆ. ಇದರಿಂದಾಗಿ ಹೆಚ್ಚಿನ ಕಬ್ಬಿನ ಅರೆಯುವಿಕೆ ಹಾಗೂ ಕೇಂದ್ರ ಸರ್ಕಾರದ ಸಕ್ಕರೆ ಮಾರಾಟದ ಅನುಮತಿ ಲೆವಿ ಹಾಗೂ ಫ್ರೀ ಸಕ್ಕರೆಯ ಮಾರಾಟ ಕಂಪನಿಯ ಅರೆಯುವಿಕೆ ಹಾಗೂ ಸಕ್ಕರೆ ದಾಸ್ತಾನಿನ ಪ್ರಮಾಣಕ್ಕೆ ಅನುಗುಣವಾಗಿಲದ್ದುದರಿಂದ ಕಂಪನಿಗೆ ರೈತರಿಗೆ ಕೂಡಲೆ ಹಣ ಪಾವತಿ ಮಾಡಲು ಸ್ವಲ್ಪ ತೊಂದರೆಯಾಗುತ್ತಿದೆ. ಆದರೂ ಪ್ರಸ್ತುತ ಸಾಲಿನಲ್ಲಿ ರೈತರು ಕಬ್ಬು ಸರಬರಾಜು ಮಾಡಿದ 35 ದಿನದ ಒಳಗಾಗಿ ಹಣ ಪಾವತಿ ಮಾಡಲಾಗುತ್ತಿದ್ದು ಇದು ರಾಜ್ಯದ ಮತ್ತು ರಾಷ್ಟ್ರದ ಇತರೆ ಸಕ್ಕರೆ ಕಾರ್ಖಾನೆಗಳಿಗೆ ಹೋಲಿಸಿದರೆ ಮೈಸೂರು ಸಕ್ಕರೆ ಕಂಪನಿಯು ಹಣ ಬಟವಾಡೆಯಲ್ಲಿ ಶೀಘ್ರಗತಿಯಲ್ಲಿ ಆಗುತ್ತಿರುತ್ತದೆ. ಇದಲ್ಲದೆ ಕಂಪನಿಯು ಬ್ಯಾಂಕುಗಳಿಂದ ಕಂಪನಿಯ ಬಂಡವಾಳವನ್ನು ರೂ. 41 ಕೋಟಿಯಿಂದ ರೂ. 55 ಕೋಟಿಗಳಿಗೆ ಹೆಚ್ಚಿಸಲು ಈಗಾಗಲೇ ಅನುಮತಿ ದೊರೆತಿದೆ ಹಾಗೂ ಕಂಪನಿಯ ಅಡಳಿತ ಮಂಡಳಿಯು ಕೇಂದ್ರ ಸರ್ಕಾರದ ಇತ್ತೀಚಿನ ನೀತಿಯಾದ ಸಕ್ಕರೆ ರಫ್ತಿನ ಪ್ರಯೋಜನ ಪಡೆದು ಈಗಾಗಲೇ 12000 ಎಂ.ಟಿ. ಸಕ್ಕರೆಯ ರಫ್ತಿಗೆ ಅಂತರಾಷ್ಟ್ರೀಯ ಕಂಪನಿಗಳಿಂದ ವ್ಯವಹಾರ ಪಡೆದಿದ್ದು. ಈಗಾಗಲೇ 6000 ಎಂ.ಟಿ. ಮೌಲ್ಯದ ಸಕ್ಕರೆ ರಫ್ತುಗೊಂಡಿದ್ದು ಇದರ ಹಣ ಈಗಾಗಲೇ ಕಂಪನಿಯು ಪಡೆದುಕೊಂಡಿರುತ್ತದೆ. ಆದ್ದರಿಂದ ಕಾರ್ಯಕಾರಿ ಬಂಡವಾಳದ ಹೆಚ್ಚಿಸುವಿಕೆ, ರಫ್ತಿಗೆ ಆಧ್ಯತೆ ಇವುಗಳ ಮೂಲಕ ಮುಂದಿನ ದಿನಗಳಲ್ಲಿ ಕಂಪನಿಯ ಹಣಕಾಸು ಪರಿಸ್ಥಿತಿ ಉತ್ತಮಗೊಂಡು ರೈತರಿಗೆ ಇನ್ನೂ ಶೀಘ್ರವಾಗಿ ಕಬ್ಬಿನ ಹಣ ಬಟವಾಡೆ ಕಾರ್ಯ ಸುಗಮಗೊಳ್ಳಲಿದೆ.

ಕಾರ್ಖಾನೆಯು ದಿನಮಹಿ ಸರಾಸರಿ 5000 ಟನ್ ಕಬ್ಬನ್ನು ಅರೆಯುತ್ತಿದ್ದರೂ ಸಹ ಜಿಲ್ಲೆಯಾದ್ಯಂತ

ಬಿದ್ದ ಅತಿವೃಷ್ಟಿಯಿಂದ ಕಾರ್ಖಾನೆಯ ಕಬ್ಬು ಅರೆಯುವಿಕೆಯಲ್ಲಿ ಕಳೆದ 20 ದಿನಗಳಿಂದ ಏರುಪೇರು ಉಂಟಾಗಲೂ ಕಾರಣವಾಯಿತು. ಸೆಪ್ಟೆಂಬರ್ ತಿಂಗಳಲ್ಲಿ 600 ಮಿಲಿಮೀಟರ್ ಮಳೆಯಾಗಿದೆ ಹಾಗೂ ಆಕ್ಟೋಬರ್ 15ರ ವರೆಗೆ 350 ಮಿಲಿಮೀಟರ್ ಮಳೆಯಾಗಿದೆ. ಇದಕ್ಕೆ ಕಾಕತಾಳೀಯವೆಂಬಂತೆ 'ಎ' ಮಿಲ್ಲಿನ 1 ರೋಲರ್ ಹಾಗೂ 'ಬಿ' ಮಿಲ್ಲಿನ 2 ರೋಲರ್‌ಗಳು ಹಾನಿಗೊಳಗಾದವು. ಸದರಿ ರೋಲರ್‌ಗಳು 15 ವರ್ಷ ಸೇವೆ ಸಲ್ಲಿಸಿದೆ. ಪ್ರತಿ ವರ್ಷವು ರೋಲರ್ ಶಾಪ್ಪ್‌ಗಳು ಕಂಡೀಷನಿಂಗ್ ಮತ್ತು ರಿಶೆಲಿಂಗ್ ಕಾರ್ಯವನ್ನು ಕಬ್ಬು ಅರೆಯುವಿಕೆಯ ಪ್ರಮಾಣದ ಅನುಸಾರಕ್ಕೆ ಮಾಡಲಾಗುತ್ತಿದೆ. ರೋಲರ್‌ಗಳ ಅಲ್ಟ್ರಾಸೊನೀಕ್ ಪರೀಕ್ಷೆ ಕೂಡ ರಿಶೆಲ್ಲಿಂಗ್ ಮಾಡುವ ಮೊದಲೇ ಮಾಡಿ ದಾಖಲಿಸಲಾಗಿದೆ. ಉತ್ತಮ ಕಬ್ಬು ಅರೆಯುವಿಕೆಗಾಗಿ ಹಾಗೂ ಉತ್ತಮ ಇಳುವರಿ ಪಡೆಯಲು ರೋಲರುಗಳ ಮೇಲೆ ಅಧಿಕ ಒತ್ತಡ ನೀಡಬೇಕಾಗುತ್ತದೆ. ಇದರಿಂದ ಸಹಜವಾಗಿ ರೋಲರ್ ಶಾಪ್ಪ್‌ಗಳಲ್ಲಿ ನಿಧಾನವಾಗಿ ಬಿರುಕು ಕಾಣಿಸಿಕೊಂಡು ಅನಿರೀಕ್ಷಿತವಾಗಿ ಒಡೆದುಹೋಗುತ್ತದೆ. ಇದು ಸಕ್ಕರೆ ಕಾರ್ಖಾನೆಗಳಲ್ಲಿ ಒಂದು ಸಾಮಾನ್ಯವಾದ ಸಂಗತಿ. ಕಳೆದ ಸಾಲಿನಲ್ಲಿ 9.68 ಲಕ್ಷ ಟನ್ ಕಬ್ಬನ್ನು ಅರೆದಿದ್ದರೂ ಸಹ 2 ರೋಲರ್‌ಗಳು ಹಾನಿಯಾಗಿದ್ದನ್ನು ಸ್ಮರಿಸಬಹುದು. ಕಳೆದ ಸಾಲಿನಲ್ಲಿ ಹಾಗೂ ಈ ಸಾಲಿನಲ್ಲಿ ಕಾರ್ಖಾನೆಯ ಹಣಕಾಸಿನ ಕಠಿಣ ಪರಿಸ್ಥಿತಿಯಿಂದ ಹಾಗೂ ಪ್ರಮುಖವಾದ ಹೊಸ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ್ದರಿಂದ ಕಾರ್ಖಾನೆಯ ಅಗತ್ಯಕ್ಕೆ ತಕ್ಕಂತ ಬಿಡಿ ರೋಲರ್‌ಗಳನ್ನು ಖರೀದಿಸಲಾಗಲಿಲ್ಲ. ಆದರೂ ಉದ್ದೇಶಿಸಿರುವ ಅತಿ ಹೆಚ್ಚಿನ ಪ್ರಮಾಣದ ಕಬ್ಬನ್ನು ಅರೆಯಲು ಅಂದರೆ 10.5 ಲಕ್ಷ ಟನ್ ಕಬ್ಬು ಅರೆಯಲು, ಅಗತ್ಯವಿರುವ ಹೆಚ್ಚಿನ ಬೇಡಿಕೆಯನ್ನು ಪೂರೈಸಲು ಕಾರ್ಖಾನೆಯು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಈ ಹಿಂದೆಯೇ ತಿಳಿಸಿದಂತೆ ಕಂಪನಿಯ ಆಧುನೀಕರಣ ಕಾರ್ಯ 3 ಹಂತವಾಗಿ ಕೈಗೊಂಡಿದ್ದು ಎರಡು ಹಂತಗಳ ಆಧುನೀಕರಣ ಈಗಾಗಲೇ ಮುಗಿದಿದೆ. ಆದರೆ ಇತ್ತೀಚೆಗೆ ತುಂಡಾಗಿರುವ ಶಾಪ್ಪ್‌ಗಳ ಅವಧಿ 15-20 ವರ್ಷಗಳು ಆಗಿದ್ದು, ಇವುಗಳನ್ನು ಈ ಮೇಲೆ ತಿಳಿಸಿದ ಆಧುನೀಕರಣದಲ್ಲಿ ಬದಲಾಯಿಸಿರಲಿಲ್ಲ. ಆದ್ದರಿಂದ ಕಬ್ಬಿನ ಸತತ ಅರೆಯುವಿಕೆಯಿಂದಾಗಿ ಈ ಶಾಪ್ಪ್‌ಗಳು ತುಂಡಾಗಿದ್ದು ಇವುಗಳ ದುರಸ್ತಿ/ಬದಲಾವಣೆಯನ್ನು ಈಗಾಗಲೇ ಮಾಡಲಾಗಿದೆ ಹಾಗೂ ಪ್ರಸ್ತುತ ಸಾಲಿನಲ್ಲಿ ಈಗಾಗಲೇ 3,05,000 ಎಂ.ಟಿ. ಕಬ್ಬನ್ನು 23-10-2000ರ ವರೆಗೆ ಅರೆಯಾಲಾಗಿದ್ದು ಇದು ದಿನವಹಿ ಸರಾಸರಿ 4900 ಮೆ.ಟ. ಇದ್ದು ಕಳೆದ ಸಾಲಿಗಿಂತ 714 ಮೆ.ಟನ್‌ನಷ್ಟು ಹೆಚ್ಚುವರಿಯಾಗಿ ಅರೆಯಲಾಗಿದೆ.

ಅಧ್ಯಕ್ಷರು : ಮಾನ್ಯ ಪಶುಸಂಗೋಪನೆ ಸಚಿವರೆ, ಇದರ ಸಾರಾಂಶ ಹೇಳಿಬಿಡಿ, ಏಕೆಂದರೆ ಇದು ಸುಮಾರು ಎರಡು-ಮೂರು ಪುಟದಷ್ಟು ಇರುತ್ತದೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಇದಕ್ಕೆ ಸಂಬಂಧಪಟ್ಟಂತೆ ವಿವರವಾದ ಉತ್ತರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು : ಮಾನ್ಯ ಸದಸ್ಯರೆ, ಇದರ ಬಗ್ಗೆ ಏನಾದರೂ ಕ್ಲಾರಿಫಿಕೇಶನ್ ಇದ್ದರೆ ಮಾತ್ರ ಕೇಳಬೇಕು, ಏಕೆಂದರೆ ಮಾನ್ಯ ಸಚಿವರು ವಿವರವಾದ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಎಂ.ಎಸ್. ಆತ್ಮಾನಂದ : ನಮ್ಮ ಬದುಕಿನ ಪ್ರಶ್ನೆಯಾಗಿರುವಂಥದ್ದು ಈ ಮೈಸೂರು ಸಕ್ಕರೆ ಕಾರ್ಖಾನೆ, ದಯಮಾಡಿ ಮಾನ್ಯ ಸಚಿವರು ಏನು ಸ್ಟೇಟ್‌ಮೆಂಟ್ ಕೊಡುತ್ತಾರೆ ಕೊಡಲಿ. ಸಾಕಷ್ಟು ಜನ ಸದಸ್ಯರ ಕ್ಷೇತ್ರದ ಬಗ್ಗೆ ಚರ್ಚೆಯಾಗುತ್ತಿದೆ, ಇದು ರೈತರ ಸಮಸ್ಯೆಯಾಗಿರುತ್ತದೆ, ಅವರು ಹೇಳಿಕೆಯನ್ನು ನೀಡಲಿ.

MR. SPEAKER : Just to save time, not to curtail your right.

ಶ್ರೀ ಎ. ಕೃಷ್ಣಪ್ಪ : ಏನಾದರೂ ಸಂಬಂಧಪಟ್ಟ ಪ್ರಶ್ನೆ ಇದ್ದರೆ ಮಾನ್ಯ ಸದಸ್ಯರು ಕೇಳಲಿ. ನಾನು ಕೊಟ್ಟಿರುವ ಸ್ಟೇಟ್‌ಮೆಂಟ್ ಮೇಲೆ ಏನಾದರೂ ಪ್ರಶ್ನೆ ಕೇಳಿದರೆ ಅದಕ್ಕೆ ನಾನು ಉತ್ತರವನ್ನು ಕೊಡುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, ನನಗೆ ಸ್ಟೇಟ್‌ಮೆಂಟ್ ಈಗತಾನೆ ಬಂದಿರುತ್ತದೆ. ನಾನು ಅದನ್ನು ಓದಿರುವುದಿಲ್ಲ, ಮಾನ್ಯ ಸಚಿವರು ಹೇಳಿಕೆಯನ್ನು ಮಾಡಲಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ಪೈಕಿ ಒಂದು ವಿಚಾರ, ಆ ಯಂತ್ರಗಳನ್ನು ರಿಪೇರಿ ಮಾಡುವುದಕ್ಕೆ ಖರ್ಚು ಮಾಡಿರುವ ಹಣ ಪೋಲಾಗಿದೆ ಎಂದು ಪ್ರಸ್ತಾಪವನ್ನು ಮಾಡಿದ್ದಾರೆ. ನಾನು ಇದಕ್ಕೆ ಹೆಚ್ಚು ವಿವರಗಳನ್ನು ವರ್ಷಾವಾರು ತರಿಸಿಕೊಂಡು ಅದನ್ನು ಒದಗಿಸಿಕೊಟ್ಟಿರುತ್ತೇನೆ. ನಾನು ಕೊಟ್ಟಿರುವ ಉತ್ತರದಲ್ಲಿ ಮಾನ್ಯ ಸದಸ್ಯರಿಗೆ ತೃಪ್ತಿಯಾಗದಿದ್ದರೆ, ನಾನು ಅವರಿಗೆ ಒಂದು ಸಲಹೆಯನ್ನು ಕೊಡುತ್ತೇನೆ. ಯಾರಾದರೊಬ್ಬ ತಜ್ಞರನ್ನು ಆ ಕಾರ್ಖಾನೆಗೆ ರವಾನೆ ಮಾಡಿ, ವಿವರವಾದ ಒಂದು ತನಿಖೆಯನ್ನು ನಡೆಸಿ, ಒಂದು ವರದಿಯನ್ನು ಕೊಡಲಿ, ಅದರ ಬಗ್ಗೆ ಸರ್ಕಾರ ಕ್ರಮವನ್ನು ರೈತರ ದೃಷ್ಟಿಯಿಂದ ಇರಬಹುದು, ಅಥವಾ ಕಾರ್ಖಾನೆಯ ದೃಷ್ಟಿಯಿಂದ ಇರಬಹುದು, ನಾನು ಅದನ್ನು ಮಾಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಹೇಳುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ : ಮಾನ್ಯ ಅಧ್ಯಕ್ಷರೆ, 2000 ಹಾಗೂ 2001ನೇ ಸಾಲಿಗೆ ಕಬ್ಬು ಅರೆಯುವ ಕಾರ್ಯ ಪ್ರಾರಂಭವಾಗುವ ಮುನ್ನ ರೈತರಿಗೆ ಹಣವನ್ನು ಪಾವತಿ ಮಾಡಿದೆ, ಆ ಹಣವನ್ನು ಕಾರ್ಖಾನೆಯ ಆಧುನೀಕರಣ, ನಿರ್ವಹಣೆಗಾಗಿ ಖರ್ಚು ಮಾಡಲಾಗಿದೆ. ರೈತರು ತಮಗೆ ಒಳ್ಳೆಯದಾಗುತ್ತದೆ ಎನ್ನುವ ಒಂದು ಕಾರಣದಿಂದ ಹಣದ ಕಠಿಣ ಪರಿಸ್ಥಿತಿಯನ್ನು ಸಹಿಸಿಕೊಂಡಿದ್ದಾರೆ. ಈ ಒಂದು ವರ್ಷದಲ್ಲಿ ಸುಮಾರು 7-8 ರೋಲರ್‌ಗಳು ಕೂಡ ಕಟ್ಟಾಗಿ ಕಾರ್ಖಾನೆ ಸರಿಯಾಗಿ ನಡೆಯುತ್ತಿಲ್ಲ, ರೈತರಿಗೆ, ಸರಿಯಾಗಿ ಪರ್ಮಿಟ್‌ಗಳನ್ನು ನೀಡದೆ ಇರುವುದರಿಂದ ಅವರು ಬಹಳ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಮಾನ್ಯ ಮಂತ್ರಿಗಳು ಅದರ ಬಗ್ಗೆ ತನಿಖೆಯನ್ನು ನಡೆಸಿ ವರದಿಯನ್ನು ತರಿಸಿಕೊಳ್ಳುತ್ತೇನೆಂದು ಹೇಳಿದ್ದಾರೆ. ನಮ್ಮ ಮೈಸೂರು ಸಕ್ಕರೆ ಕಾರ್ಖಾನೆ ಕಬ್ಬು ಅರೆಯುವ ಯೂನಿಟ್ ಹಾಗೂ ಪ್ರೋಸೆಸಿಂಗ್ ಯೂನಿಟ್‌ಗೆ ಸಾಮರಸ್ಯ ಇರುವುದಿಲ್ಲ. ನಮ್ಮ ಅನೇಕ ಜ್ಯೂಸ್ ವ್ಯರ್ಥವಾಗಿ ಇಳುವರಿಯ ಮೇಲೆ ಪರಿಣಾಮವನ್ನು ಬೀರುತ್ತಿದೆ, ಅಪಾರವಾದ ಹಣವನ್ನು ಖರ್ಚು ಮಾಡಿದರೂ ಕೂಡ ಯಾಂತ್ರಿಕ ದೋಷವನ್ನು ಪದೇ ಪದೇ ಅನುಭವಿಸಿ ತುಂಬಾ ತೊಂದರೆಯಲ್ಲಿದೆ. ಈಗ ಸಾಮರಸ್ಯ ಇಲ್ಲದಿರತಕ್ಕಂಥ ಒಂದು ಅನು ಅಸಮರ್ಪಕವಾದ ಆಡಳಿತವನ್ನು ತಾಂತ್ರಿಕ ದೋಷಕ್ಕೆ ಪದೇ ಪದೇ

ಒಳಗಾಗುತ್ತಿದೆ. ಮಂತ್ರಿಗಳು ಹೇಳಿದಂತೆ ಇದಕ್ಕೆ ಸಮಗ್ರವಾದ ಒಂದು ತನಿಖೆಯನ್ನು ಮೈಸೂರು ಸಕ್ಕರೆ ಕಾರ್ಖಾನೆಯ ಆಡಳಿತ ವೈಖರಿಯ ಬಗ್ಗೆ ಮಾಡಬೇಕೆಂದು ಇಲ್ಲಿ ಕೋರುತ್ತಾ, ಮತ್ತೊಂದು ವಿಷಯವನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ನಮ್ಮ ಸಕ್ಕರೆ ಕಾರ್ಖಾನೆಯಲ್ಲಿ ರೈತರನ್ನಾಗಲಿ ಅಥವಾ ಜನಪ್ರತಿನಿಧಿಗಳನ್ನಾಗಲಿ ವಿಶ್ವಾಸಕ್ಕೆ ತೆಗೆದುಕೊಳ್ಳುವ ಕೆಲಸವನ್ನು ಅಷ್ಟು ಸಮರ್ಪಕವಾಗಿ ಮಾಡುತ್ತಿಲ್ಲ. ಆ ಒಂದು ಕೊರತೆಯನ್ನು ನಿವಾರಿಸತಕ್ಕಂಥ ನಿಟ್ಟಿನಲ್ಲಿ ಆಡಳಿತ ಮಂಡಳಿಯ ಸೂಕ್ತವಾದ ಒಂದು ಎಚ್ಚರಿಕೆಯನ್ನು ಮಾನ್ಯ ಮಂತ್ರಿಗಳು ನೀಡಬೇಕೆಂದು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಾ, ಮಾನ್ಯ ಸಚಿವರು ಈಗಾಗಲೇ ಒಪ್ಪಿಕೊಂಡಿರುವ ಹಾಗೆ ಮೈಸೂರು ಸಕ್ಕರೆ ಕಾರ್ಖಾನೆಯ ಆಡಳಿತ ವೈಖರಿಯ ಬಗ್ಗೆ, ಯಾಂತ್ರಿಕ ದೋಷ ಹಾಗೂ ಇನ್ನಿತರ ವ್ಯವಹಾರಗಳ ಬಗ್ಗೆ ಸಮಗ್ರವಾದ ಒಂದು ತನಿಖೆಯನ್ನು ಮಾಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ಸಕ್ಕರೆ ಕಾರ್ಖಾನೆಯನ್ನು ತನಿಖೆ ಮಾಡಿಸುವುದಾಗಿ ಮೂಲತಃ ನಾನು ಒಪ್ಪಿಕೊಂಡಿದ್ದೇನೆ. ಮಾನ್ಯ ಸದಸ್ಯರು ಆಡಳಿತಕ್ಕೆ ಹಾಗೂ ಪ್ರೊಡಕ್ಷನ್‌ಗೆ ಸಂಬಂಧಪಟ್ಟ ಹಾಗೆ ಏನು ಹೇಳುತ್ತಿದ್ದಾರೆ ಅದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿರುವುದಿಲ್ಲ. ಆಲ್ ಟೈಮ್ ಪ್ರೊಡಕ್ಷನ್ ಆಗಿದೆ ಎಂದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಶಾಫ್ಟ್ ಕೆಟ್ಟು ಬ್ರೇಕ್ ಡೌನ್ ಆಗಿದ್ದರೂ ಕೂಡ ಬೇರೆ ವರ್ಷದ ಪರಿಸ್ಥಿತಿಗೆ ಹೋಲಿಸಿದರೆ ಈ ವರ್ಷ ಪ್ರೊಡಕ್ಷನ್ ಆಗಿದೆ. ಕ್ವಾಲಿಟಿ ಆಫ್ ಈಲ್ಡ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಯಾವ ವರ್ಷದಲ್ಲಿ ಆಗದ ಒಂದು ಗುಣಮಟ್ಟವನ್ನು ಈ ಕಾರ್ಖಾನೆಯಲ್ಲಿ ಈ ವರ್ಷ ನಾವು ಪಡೆದಿದ್ದೇವೆ. ರೈತರಿಗೆ ನೀಡಿರುವ ಹಣಕಾಸಿನ ವಿಚಾರದ ಬಗ್ಗೆ ಹೇಳಿದ್ದಾರೆ. ದಕ್ಷಿಣ ಭಾರತದಲ್ಲಿ ಅದು ಕರ್ನಾಟಕ ರಾಜ್ಯದಲ್ಲಿ ಹೇಳಬೇಕೆಂದರೆ, ಮೈಸೂರು ಸಕ್ಕರೆ ಕಾರ್ಖಾನೆ ಎನ್ನುವ ಮಾತನ್ನು ಮಾತ್ರ ನಾನು ಹೇಳುತ್ತೇನೆ. ಅವರು ಜನಪ್ರತಿನಿಧಿಗಳಿಗೆ ಗೌರವ ಇಲ್ಲವೆಂದು ಹೇಳಿದ್ದಾರೆ. ಆದರೆ ನಾವು ಇವರಿಗೆ ಬಹಳ ಸಲ ಗೌರವವನ್ನು ತೋರಿಸಿದ್ದೇವೆ. ಆಡಳಿತವನ್ನು ಹಿಡಿದುಕೊಂಡು ಬೆಲೆ ನಿಗದಿ ಮಾಡುವ ವಿಚಾರದಲ್ಲಿಯೂ ಕೂಡ ಇರಬಹುದು, ಹಣ ಬಟವಾಡೆ ಮಾಡುವ ವಿಚಾರದಲ್ಲಿ ಇರಬಹುದು, ಕಾರ್ಖಾನೆಯನ್ನು ಸ್ಟಾರ್ಟ್ ಮಾಡಿ ಪ್ರೊಡಕ್ಷನ್ ಸ್ಟಾರ್ಟ್ ಮಾಡುವ ವಿಚಾರದಲ್ಲಿರಬಹುದು, ಎಲ್ಲಾ ಚುನಾಯಿತ ಪ್ರತಿನಿಧಿಗಳನ್ನು ಇಟ್ಟುಕೊಂಡು ನಾವು ಮಾಡಿದ್ದೇವೆ. ಮತ್ತು ಏನಾದರೂ ಈ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಕೊರಗು ಇದ್ದರೆ, ಅದನ್ನು ಆಡಳಿತದ ಮುಖೇನ ನಾನು ಸರಿ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತಾ, ತಾಂತ್ರಿಕ ವಿಚಾರದಲ್ಲಿ ಯಾರಾದರೂ ಒಬ್ಬ ತಜ್ಞರನ್ನು ನೇಮಕ ಮಾಡಿ ವರದಿಯನ್ನು ತರಿಸಿಕೊಂಡು, ಮಾನ್ಯ ಸದಸ್ಯರನ್ನು ಕೂಡ ಕರೆಯಿಸಿ ನ್ಯೂನತೆಗಳನ್ನು ಸರಿ ಮಾಡುವುದಕ್ಕೆ ಕ್ರಮ ಸರ್ಕಾರ ತೆಗೆದುಕೊಳ್ಳುತ್ತದೆ. ಎನ್ನುವ ಬಗ್ಗೆ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

(ಮಾನ್ಯ ಬಿಜೆಪಿ ಶಾಸಕರು ಪುನಃ ಸದನಕ್ಕೆ ಬಂದರು)

1.30 ಪಿ.ಎಂ.